


Reg No. : RSR/SOUHARDA/REG/14 /2311/2012

# ಶ್ರೀ ಚಿದಂಬರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ, ಬೆಂಗಳೂರು

ಕೇಂದ್ರ ಕಛೇರಿ : ನಂ. 214, "ಭವಾನಿ", ಸಿಂಗಾಪೂರ ಪ್ಯಾರಾಡೈಸ್, ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು-97.

ಸ್ಥಾಪನೆ : 2012

Contact : **+91-76764 41315** | info.chidambara@gmail.com | www.scspsn.com


## ವಾರ್ಷಿಕ ಸಾಮಾನ್ಯ ಸಭೆಯ ನೋಟಿಸ

ಸಹಕಾರಿಯ ಸದಸ್ಯ ಬಂಧುಗಳೇ,

ಸಹಕಾರಿಯ ಹದಿನಾಲ್ಕನೇಯ ವಾರ್ಷಿಕ ಸರ್ವ ಸದಸ್ಯರ ಸನ್ 2023-24ನೇ ಸಾಲಿನ ಮಹಾಸಭೆಯನ್ನು ರವಿವಾರ, ದಿನಾಂಕ 15-09-2024 ರಂದು ಬೆಳಿಗ್ಗೆ 11-00 ಗಂಟೆಗೆ, ಸಹಕಾರಿಯ ಅಧ್ಯಕ್ಷರಾದ ಶ್ರೀ ಜಿ.ಕೆ. ಕುಲಕರ್ಣಿ ಇವರ ಅಧ್ಯಕ್ಷತೆಯಲ್ಲಿ "ಶ್ರೀ ಶೃಂಗೇರಿ ಶಂಕರ ಮಠ, ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠಂ ಶೃಂಗೇರಿ ಶಾಖೆ - ನಂ. 101, 9 ಮತ್ತು 11ನೇ ಕ್ರಾಸ್ ಮಧ್ಯದಲ್ಲಿ, ವಿದ್ಯಾಮಂದಿರ ಶಾಲೆ, ಮಲ್ಲೇಶ್ವರಂ, ಬೆಂಗಳೂರು-560003 ಇಲ್ಲಿ ಸಭೆ ನಡೆಸಲಾಗುವದೆಂದು ಸದಸ್ಯರೆಲ್ಲರಿಗೂ ಈ ಮೂಲಕ ತಿಳಿಯಪಡಿಸಲಾಗಿದೆ. ತಾವು ಅನುವು ಮಾಡಿಕೊಂಡು ಸಭೆಯ ಕಾರ್ಯ-ಕಲಾಪಗಳಲ್ಲಿ ಭಾಗವಹಿಸಬೇಕಾಗಿ ಕೋರಲಾಗಿದೆ.

### <u>ಸಭೆಯ ಕಾರ್ಯ ಕಲಾಪಗಳು</u>

- ಪ್ರಾರ್ಥನೆ
- ಸ್ವಾಗತ
- ಸನ್ 2023-24 ನೇ ಸಾಲಿನ ಸರ್ವ ಸದಸ್ಯರ ಸಭೆಯ ನೋಟಿಸನ್ನು ಓದಿ ಅನುಮೋದಿಸುವದು.
- ದಿನಾಂಕ 09-09-2023 ರಂದು ಜರುಗಿದ ಹದಿಮೂರನೇಯ ಸರ್ವ ಸದಸ್ಯರ ಸಭೆಯ ನಡುವಳಿಕೆಗಳನ್ನು ಓದಿ ಅನುಮೋದಿಸುವುದು.
- ಸಹಕಾರಿಯ ಸನ್ 2023-24ನೇ ಸಾಲಿನ ಲೆಕ್ಕ-ಪತ್ರಗಳು ಪರಿಶೋಧನೆಯಾಗಿದ್ದು ಪರಿಶೋಧನಾ ವರದಿಯ ಅಂಗಿಕಾರ.
- ಸಹಕಾರಿಯ ಸನ್ 2023-24 ನೇ ಸಾಲಿನ ಆಡಳಿತ ಮಂಡಳಿಯ ವರದಿ ಮತ್ತು ಲಾಭಾಂಶ ಹಂಚಿಕೆ ಪ್ರಸ್ತಾವ ಅಂಗೀಕರಿಸುವುದು.
- ಸಹಕಾರಿಯ ಸನ್ 2023-24ನೇ ಸಾಲಿನಲ್ಲಿ ಮಿತಿಗಿಂತ ಅಧಿಕವಾಗಿರುವ ಖರ್ಚು-ವೆಚ್ಚಗಳಿಗೆ ಅನುಮೋದನೆ ಪಡೆಯುವದು.
- ಸಹಕಾರಿಯ ಸನ್ 2023-24 ನೇ ಸಾಲಿನಲ್ಲಿ ಮತ್ತು 01-04-2023 ರಿಂದ 31-03-2024 ರ ವರೆಗೆ ಸದಸ್ಯತ್ವ ಕೋರಿ ಬಂದಿರುವ ಸದಸ್ಯರಿಗೆ ಪ್ರವೇಶ ನೀಡಿ ಅವರಿಗೆ ಶೇರು ಮಂಜೂರ ಮಾಡುವದು ಮತ್ತು ಸದಸ್ಯರ ಶೇರು ಮರುಪಾವತಿ ಹಾಗೂ ಬದಲಾವಣೆ ಮಾಡುವ ಕುರಿತು.
- ಸಹಕಾರಿಯ ಸನ್ 2024-25ನೇ ಸಾಲಿನ ಅಂದಾಜು ಆಯ-ವ್ಯಯಗಳ ಅಂಗೀಕಾರ.
- ಸಹಕಾರಿಯ ಸನ್ 2024-25ನೇ ಸಾಲಿನ ಲೆಕ್ಕ ಪರಿಶೋಧಕರ ಮತ್ತು ಆಂತರಿಕ ಲೆಕ್ಕ ಪರಿಶೋಧಕರ ನೇಮಕಾತಿ ಹಾಗೂ ಸಂಭಾವನೆ ನಿಗದಿಪಡಿಸುವ ಕುರಿತು.
- ಸಹಕಾರಿಯ ಹೆಸರಿನಲ್ಲಿರುವ ಆಸ್ತಿಗಳನ್ನು ಮಾರಾಟ ಮಾಡಲು ಅಧಿಕಾರ ನೀಡುವ ಕುರಿತು.
- ಸಹಕಾರಿಯು ಪರಿಚಯಿಸಿರುವ ಠೇವಣಿ ಬಡ್ಡಿದರಗಳು, ಸಾಲದ ಬಡ್ಡಿ ದರಗಳು, ಲಕ್ಷಾಧೀಶ ಯೋಜನೆ, ದ್ವಿಗುಣ ಠೇವಣಿ ಯೋಜನೆ, ಸಾಲದ ಮಂಜೂರಾತಿ ನಿಯಮಗಳಿಗೆ ಹಾಗೂ ನೌಕರರಿಗೆ ನೀಡಲಾಗುವ ಸೌಲಭ್ಯಗಳ, ಸಿಬ್ಬಂದಿ ನೇಮಕಾತಿ, ನೌಕರರ ಸೇವಾ ನಿಯಮಾವಳಿಗಳ ಕುರಿತು.
- ಹೊಸ ಶಾಖೆಗಳ ಆರಂಭಕ್ಕೆ ಅನುಮೋದನೆಯನ್ನು ಪಡೆಯುವದು.
- ಸದಸ್ಯರಿಂದ ಬಂದ ವಿಷಯಗಳ ಪರಿಶೀಲನೆ.
- ಸಭೆಯಲ್ಲಿ ಅಧ್ಯಕ್ಷರ ಅಪ್ಪಣೆಯ ಮೇರೆಗೆ ಬರುವ ಇತರ ವಿಷಯಗಳು.
- ವಂದನಾರ್ಪಣೆ.

ಕಾರ್ಯಕಾರಿ ಮಂಡಳಿಯ ಆದೇಶದ ಮೇರೆಗೆ
ಸಹಿ/-
ಎಮ್.ಎಮ್.ಕುಲಕರ್ಣಿ
ಮುಖ್ಯಕಾರ್ಯ ನಿರ್ವಹಣಾ ಅಧಿಕಾರಿಗಳು
ಮೊ : 9945949539

ಬೆಂಗಳೂರು
ದಿನಾಂಕ : 27-08-2024

## –: ಸದಸ್ಯರಿಗೆ ಸೂಚನೆಗಳು :–

- ಸಭೆಯಲ್ಲಿ ಚರ್ಚೆಗಾಗಿ ಸೂಚಿಸತಕ್ಕ ವಿಷಯಗಳನ್ನು 7 ದಿವಸದ ಮುಂಚಿತವಾಗಿ ಸಹಕಾರಿಗೆ ಲಿಖಿತವಾಗಿ ತಿಳಿಸಬೇಕು.
- ಸದಸ್ಯರು ಸದಸ್ಯರಾಗುವ ವೇಳೆಯಲ್ಲಿ ಕೊಟ್ಟಿದ್ದ ವಿಳಾಸ ಬದಲಾಣೆಯಾಗಿದ್ದರೆ ತಕ್ಷಣ ಸಹಕಾರಿಗೆ ಲಿಖಿತವಾಗಿ ತಮ್ಮ ವಿಳಾಸವನ್ನು ತಿಳಿಸಬೇಕು.
- ಸಹಕಾರಿಯ ಉಪವಿಧಿ 11(3) ರ ಪ್ರಕಾರ ಯಾವುದೇ ಸದಸ್ಯನು ಸಹಕಾರಿಯ 5 ರಲ್ಲಿ 3 ನಿರಂತರ ಸಾಮಾನ್ಯ ಸಭೆಗೆ ಪೂರ್ವಾನುಮತಿ ಇಲ್ಲದೇ ಗೈರು ಹಾಜರಾಗಿದ್ದರೆ ಸದಸ್ಯತ್ವಕ್ಕೆ ಅನರ್ಹನಾಗುತ್ತಾನೆ.
- ಆಡಳಿತ ಮಂಡಳಿಯ ವರದಿ ಮತ್ತು ಆಸ್ತಿ–ಜವಾಬ್ದಾರಿ ತಃಖ್ತೆ ಹಾಗೂ ಲಾಭ–ನಷ್ಟದ ಖಾತೆ ಆಂಗ್ಲ ಭಾಷೆಯಲ್ಲಿ ಬೇಕಾದಲ್ಲಿ ಇ–ಮೇಲ್ ಹಾಗೂ ದೂರವಾಣಿಯ ಮೂಲಕ ವಿನಂತಿಸುವದು. **e-mail: info.chidambara@gmail.com W/App or Call Mob: 7676441315 / Website :www.scspsn.com.**
- **On request the English version copies of The Director's Report, Audited Balance Sheet, Profit & Loss Account will be emailed. Kindly inform by (e-mail : info.chidambara@gmail.com) or W/App or Call Mob : 7676441315/Website : www.scspsn.com.**
- ವಾರ್ಷಿಕ ಸಾಮಾನ್ಯಸಭೆಯ ಪತ್ರಿಕೆಯನ್ನು ಸಂಸ್ಥೆಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಹಾಗೂ ಎಲ್ಲ ಶಾಖೆಗಳಲ್ಲಿ ಒದಗಿಸಲಾಗುತ್ತದೆ.
- ಉಪವಿಧಿ 7(2)ರ ಅನ್ವಯ.

1. ಸಹಕಾರಿಯ ಯಾವುದೇ ರೀತಿಯ ಠೇವಣಿ ಯೋಜನೆಯಲ್ಲಿ (ಪಿಗ್ಮಿ ಹೊರತುಪಡಿಸಿ) ಕನಿಷ್ಠ ರೂ.1000/– ಒಂದು ವರ್ಷವಾದರೂ ತೊಡಗಿಸಬೇಕು.

ಅಥವಾ

2. ಹಿಂದಿನ ಒಂದು ವರ್ಷದ ಅವಧಿಯಲ್ಲಿ ಕನಿಷ್ಠ ರೂ. 250/– ಬಡ್ಡಿಯನ್ನು ಕನಿಷ್ಠ 3 ತಿಂಗಳಿಗಿಂತ ಹೆಚ್ಚು ಬಾಕಿ ಉಳಿಯದಂತೆ ಸಾಲದ ಖಾತೆಗಳಿಗೆ ಪಾವತಿಸಿರಬೇಕು.

ಈ ವಿಷಯಗಳಲ್ಲಿ ಕನಿಷ್ಠ ಒಂದನ್ನಾದರು ಹಿಂದಿನ ಸತತ 2 ವರ್ಷ ಪಾಲಿಸದ ಸದಸ್ಯರು ಸಾಮಾನ್ಯ ಸಭೆ, ಚುನಾವಣೆಗಳಲ್ಲಿ ಪಾಲ್ಗೊಳ್ಳಲು ಮತ್ತು ಮತ ಚಲಾಯಿಸಲು ಹಾಗೂ ಕಾಯ್ದೆ ಪ್ರಕಾರ ಸದಸ್ಯರಾಗಿ ಮುಂದುವರೆಯಲು ಅನರ್ಹರಾಗುತ್ತಾರೆ.

■ ತೆರೆದ ಅಂಚೆ

ಗೆ,
ಶ್ರೀಮತಿ/ಶ್ರೀ ______________________

______________________

______________________

______________________

______________________ ☐☐☐ ☐☐☐

ಇಂದ :

**ಶ್ರೀ ಚಿದಂಬರ ಸೌಹಾರ್ದ ಪತ್ತಿನ ಸಹಕಾರಿ ನಿಯಮಿತ,**
ನಂ. 214, "ಭವಾನಿ", ಸಿಂಗಾಪೂರ ಪ್ಯಾರಾಡೈಸ್,
ವಿದ್ಯಾರಣ್ಯಪುರ ಅಂಚೆ, ಬೆಂಗಳೂರು – 560097
ಮೊಬೈಲ್ ಸಂಖ್ಯೆ : 7676441315 / 9480769445